







(8ನೇ ಪುಟದಿಂದ)

## ಜೇನು ನೊಣ

ಯೂರೋಪಿನಲ್ಲಿ ಕಂಡುಬರುವ ಓಫ್ರಿಸ್ ಎಪಿಫೆರಾ ಎಂಬ ಆರ್ಕಿಡ್‌ಗಳು ಪರಾಗಸ್ಪರ್ಶಕ್ಕಾಗಿ ಜೇನುನೊಣಗಳಂತೆ ಕಾಣಿಸಿಕೊಳ್ಳುತ್ತವೆ. ಹೆಣ್ಣು ಜೇನು–ನೊಣಗಳಂತೆ ಕಾಣುವ ಈ ಹೂಗಳತ್ತ ಗಂಡು ಜೇನು ನೊಣಗಳು ಆಕರ್ಷಣೆ–ಗೊಳ್ಳುತ್ತವೆ. ಇದರಿಂದ ಜೇನು ನೊಣಗಳು ಪರಾಗರೇಣುಗಳನ್ನು ಮೈತುಂಬ ಅಂಟಿಸಿಕೊಳ್ಳುತ್ತವೆ. ಆ ಮೇಲೆ ಅಕ್ಕ ಪಕ್ಕದ ಹೂಗಳಿಗೆ ಇವನ್ನು ಹರಡುತ್ತವೆ.

## ಪಕ್ಷಿಯ ತಲೆ

ಹಾರುತ್ತಿರುವ ಪತಂಗವನ್ನು ಹೋಲುವುದರಿಂದ ಈ ಆರ್ಕಿಡ್ ಅನ್ನು ಗುಲಾಬಿ ಬಣ್ಣದ ಪತಂಗ ಆರ್ಕಿಡ್ ಎಂದೂ  ಕರೆಯುತ್ತಾರೆ. ಟರ್ಕಿ, ಇರಾನ್, ಇರಾಕ್, ಗ್ರೀಸ್ ದೇಶಗಳಲ್ಲಿ ಕಂಡುಬರುವ ಈ ಆರ್ಕಿಡ್ ಪಲನೋಪ್ಸಿಸ್ ಜಾತಿಗೆ ಸೇರಿದೆ. ಮಕರಂದ ಹೀರುತ್ತಿರುವ ಪಕ್ಷಿಯ ತಲೆಯನ್ನೋ ಅಥವಾ ಹೂವಿನ ಮೇಲೆ ಬಿದ್ದ ಮಗುವನ್ನೋ ಈ ಹೂವು ಹೋಲುತ್ತದೆ.

## ಬಿಳಿ ಕೊಕ್ಕರೆ

ಈ ಆರ್ಕಿಡ್‌ನ ದಳಗಳು ಪಕ್ಷಿಯ ರೆಕ್ಕೆ–ಪುಕ್ಕಗಳಂತೆ ಹರಡಿಕೊಂಡು ಇದೀಗ ಹಾರಲು ತಯಾರಾಗಿರುವಂತೆ ಕಾಣುತ್ತವೆ. ಚೀನಾ, ರಷ್ಯಾ, ಕೊರಿಯಾಗಳಲ್ಲಿ ಕಂಡುಬರುವ ಈ ಆರ್ಕಿಡ್‌ಅನ್ನು ಬಿಳಿ ಕೊಕ್ಕರೆಯಂತಹ ಆರ್ಕಿಡ್ ಎಂದು ಕರೆಯುವರು. ಸಸ್ಯಶಾಸ್ತ್ರದಲ್ಲಿ ಹೆಬೆನೇರಿಯಾ ರೇಡಿಯೇಟಾ ಎಂಬ ಹೆಸರಿದೆ.

## ಹಾರುವ ಬಾತುಕೋಳಿ

ಕೇವಲ 50 ಸೆಂ.ಮೀ. ಇರುವ ಈ ಆರ್ಕಿಡ್ ಪೂರ್ವ ಮತ್ತು ದಕ್ಷಿಣ ಆಸ್ಟ್ರೇಲಿಯಾದಲ್ಲಿ ಕಂಡುಬರುತ್ತದೆ. ಹಾರುವ ಬಾತುಕೋಳಿಯನ್ನು ಹೋಲುವ ಇದರ ವೈಜ್ಞಾನಿಕ ಹೆಸರು ಕಾಲಿಯಾನಾ ಮೇಜರ್.

## ಬೆತ್ತಲೆ ಮನುಷ್ಯ

ಥಟ್ಟನೆ ನೋಡಿದರೆ ಬೆತ್ತಲೆ ಮನುಷ್ಯನಂತೆ ಕಾಣುವುದರಿಂದ ಈ ಹೆಸರು ಬಂದಿದೆ. ವೈಜ್ಞಾನಿಕವಾಗಿ ಆರ್ಕಿಸ್ ಇಟಾಲಿಕಾ ಎಂದು ಕರೆಯುವರು.

## ಪಾರಿವಾಳ

ಪಕ್ಷಿಯ ತಲೆಯಲ್ಲ, ಇಡಿ ಪಾರಿವಾಳವೇ ಅಡಗಿ ಕುಳಿತಿರುವಂತೆ ಈ ಆರ್ಕಿಡ್ ಕಾಣಿಸುತ್ತದೆ. ಸಸ್ಯಶಾಸ್ತ್ರೀಯ ಹೆಸರು ಪೆರಿಸ್ಟೇರಿಯಾ ಇಲಾಟಾ.

ಇನ್ನೊಂದು ಪ್ರಭೇದವಿದೆ– ಬೆಚ್ಚನೆ ಹೊದಿಕೆಯಲ್ಲಿ ಮಲಗಿದ ಕೂಸಿನಂತಹ ಆರ್ಕಿಡ್! ಕೂಸು ಹೊದಿಕೆಯೊಂದರಲ್ಲಿ ಮಲಗಿದಂತೆ ಗೋಚರಿಸುತ್ತದೆ. ಎಂಗ್ಯೂಲೋವಾ ಯುನಿಫ್ಲೋರ ಎನ್ನುವುದು ವೈಜ್ಞಾನಿಕ ಹೆಸರು.

## ಮನುಷ್ಯನ ತಲೆಬುರುಡೆ

ಮನುಷ್ಯನ ತಲೆಬುರುಡೆಯಂತೆ ಕಾಣುವ ಇದನ್ನು ವೈಜ್ಞಾನಿಕವಾಗಿ ಎಂಟಿರಿನಂ ಎನ್ನುವರು. ತಲೆ ಬುರುಡೆಗಳ ಸಾಲು ಸಾಲೇ ಕಾಣಿಸುತ್ತವೆ. ಅನ್ಯಗ್ರಹವಾಸಿಯಂತೆ ಕಾಣಿಸುವ ಆರ್ಕಿಡ್‌ನ ಇನ್ನೊಂದು ಪ್ರಭೇದ ಖುಷಿ–ಯಿಂದ ಇದ್ದಂತೆ ಕಾಣಿಸುತ್ತದೆ. ಕ್ಯಾಲ್ಸಿಯೋಲೇರಿಯಾ ಯುನಿಫ್ಲೋರ ಎನ್ನುವುದು ಇದರ ಹೆಸರು.